84

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
# ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು – 560 001

## ದಿನಾಂಕ:17 ಮತ್ತು 18ನೇ ಡಿಸೆಂಬರ್ 2012ರಂದು ನಡೆದ ಟೆಂಡರ್ ಪರಿಶೀಲನಾ ಸಮಿತಿಯಿಂದ ಟೆಂಡರ್ ಮೂಲಕ 43 ಗ್ರೇಡ್ ಸಿಮೆಂಟ್ ಖರೀದಿಸಲು ನಡೆದ 2ನೇ ಸಭೆಯ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು**

| | |
|---|---|
| 1.ಶ್ರೀ.ಹೆಚ್.ಜಿ. ಶಿವಾನಂದಮೂರ್ತಿ | ವ್ಯವಸ್ಥಾಪಕ ನಿರ್ದೇಶಕರು, |
| 2. ಶ್ರೀ. ಪ್ರಭಾಕರ್ ಹೆಚ್ ಚೇಣಿ | ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ |
| 3. ಶ್ರೀ.ಕೃಷ್ಣ | ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹು ಮಹಡಿ ಕಟ್ಟಡ, ಬೆಂಗಳೂರು |
| 4. ಶ್ರೀ. ಆರ್. ರಂಗರಾಜನ್ | ಪ್ರಧಾನ ವ್ಯವಸ್ಥಾಪಕರು (ಉತ್ತರ) ಹಾಗೂ ಸದಸ್ಯ ಕಾರ್ಯದರ್ಶಿ |
| 5. ಶ್ರೀ.ರತ್ನಕುಮಾರ್ | ಜಂಟಿ ನಿರ್ದೇಶಕರು, ಬಿಬಿಎಂಪಿ |
| 6. ಶ್ರೀ.ಸಿ.ಜಿ.ನಂಜರಾಜ್ | ಉಪ ನಿರ್ದೇಶಕರು (ಕಾಮಗಾರಿ) |
| 7. ಶ್ರೀಮತಿ.ಬಿ.ವಿ. ರೂಪಶ್ರೀ | ಉಪ ನಿರ್ದೇಶಕರು (ಲೆಕ್ಕಪತ್ರ) |

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್‌ನ ಉಪ ವಿಭಾಗಗಳಿಗೆ ಅವಶ್ಯವಿರುವ ಸಿಮೆಂಟ್ ಸರಬರಾಜಿಗಾಗಿ ಅಧಿಸೂಚನೆ ಸಂ:ಕೆಆರ್‌ಐಡಿಎಲ್/ಕಾಮಗಾರಿ/ಸಿಮೆಂಟ್/ಟೆಂಡರ್/2012–13 ದಿನಾಂಕ: 05–04–2012ರಲ್ಲಿ ಇ–ಟೆಂಡರ್ ಮೂಲಕ ಕರೆದ ಟೆಂಡರನಲ್ಲಿ 5 ಸಿಮೆಂಟ್ ಉತ್ಪಾದಕರು ಭಾಗವಹಿಸಿದ್ದರು. ಸದರಿ ಫೈನಾನ್ಷಿಯಲ್ ಬಿಡ್ ಅನ್ನು ದಿನಾಂಕ: 09–05–2012 ರಲ್ಲಿ ತೆರೆದು ಪರಿಶೀಲಿಸಿದಾಗ, ಎಲ್ಲಾ ಉತ್ಪಾದಕರು ಹೆಚ್ಚಿನ ದರ ನಮೂದಿಸಿದ್ದರಿಂದ ಅದನ್ನು ತಿರಸ್ಕರಿಸಿ, ಮರು ಟೆಂಡರನ್ನು 05–07–2012 ರಂದು ಅಗತ್ಯವಾದ ಅಂದಾಜು 80,000 ಮೆಟ್ರಿಕ್ ಟನ್ ಸಿಮೆಂಟ್‌ಅನ್ನು ಮುಂದಿನ 6 ತಿಂಗಳ ಅವಧಿಗೆ ಸರಬರಾಜಿಗೆ ಟೆಂಡರ್ ಮೂಲಕ ಪ್ರಮುಖ ದಿನಪತ್ರಿಕೆಗಳ ಮುಖಾಂತರ 2ನೇ ಬಾರಿಗೆ ಇ–ಟೆಂಡರ್ ಕರೆಯಲಾಯಿತು. ಇವುಗಳ ತಾಂತ್ರಿಕ ಬಿಡ್ ಅನ್ನು ದಿನಾಂಕ: 01–08–2012 ಅನ್ನು ತೆರೆದು ಭಾಗವಹಿಸಿದ 10 ಸಂಸ್ಥೆಗಳ ಪೈಕಿ ಈ ಕೆಳಕಂಡ 7 ಸಂಸ್ಥೆಗಳ ತಾಂತ್ರಿಕ ಬಿಡ್ ಅನ್ನು ಅಂಗೀಕರಿಸಲಾಗಿತ್ತು.

01. ಮೆ: ಎ.ಸಿ.ಸಿ.ಸಿಮೆಂಟ್ಸ್, ಬೆಂಗಳೂರು
02. ಮೆ: ಅಂಜನಿ ಪೋರ್ಟ್‌ಲ್ಯಾಂಡ್‌ಸಿಮೆಂಟ್ಸ್, ಬೆಂಗಳೂರು
03. ಮೆ: ಜುವಾರಿ ಸಿಮೆಂಟ್ಸ್, ಬೆಂಗಳೂರು
04. ಮೆ: ಚೆಟ್ಟಿನಾಡು ಸಿಮೆಂಟ್ಸ್, ಬೆಂಗಳೂರು
05. ಮೆ: ಅಲ್ಟ್ರಾಟೆಕ್ ಸಿಮೆಂಟ್ಸ್, ಬೆಂಗಳೂರು
06. ಮೆ: ಕೇಸೋರಾಮ್ ಇಂಡಸ್ಟ್ರೀಸ್ ಲಿಮಿಟೆಡ್ (ವಾಸವದತ್ತ) ಬೆಂಗಳೂರು
07. ಮೆ: ಭಾರತಿ ಸಿಮೆಂಟ್ಸ್, ಬೆಂಗಳೂರು

83

ಸದರಿ 7 ಸಂಸ್ಥೆಗಳ ಸಲ್ಲಿಸಿರುವ ಫೈನಾನ್ಷಿಯಲ್ ಬಿಡ್ ಅನ್ನು ದಿನಾಂಕ: 22-09-2012ರಂದು ತೆರೆದು ಅವುಗಳು ಅರ್ಹವೆಂದು ಪರಿಗಣಿಸಲಾಯಿತು.

ಟೆಂಡರ್ ಪರಿಶೀಲನಾ ಸಮಿತಿಯ ಪ್ರಥಮ ಸಭೆಯು ದಿನಾಂಕ: 29-11-2012ರಂದು ಕರೆಯಲಾಯಿತು. ಸದರಿ ಸಭೆಯಲ್ಲಿ ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ ರವರು ಕೆಲವೊಂದು ವಿವರವಾದ ಮಾಹಿತಿಗಳನ್ನು ಕ್ರೋಡಿಕರಿಸಿ ಸಭೆಯ ಮುಂದೆ ಮಂಡಿಸಲು ಸೂಚಿಸಿದ್ದರ ಹಿನ್ನೆಲೆಯಲ್ಲಿ ಟೆಂಡರ್ ಬಿಡ್ ಅವಧಿಯನ್ನು ಒಂದು ತಿಂಗಳ ಮಟ್ಟಿಗೆ ಅಂದರೆ ದಿನಾಂಕ: 30-12-2012ರವರೆಗೆ ವಿಸ್ತರಿಸಲಾಗಿರುತ್ತದೆ.

ನಂತರ ಟೆಂಡರ್ ಪರಿಶೀಲನಾ ಸಮಿತಿಯ ದ್ವಿತೀಯ ಸಭೆಯು ದಿನಾಂಕ 17-12-2012ರಂದು ನಡೆದಿದ್ದು, ಕೆಳಕಂಡ ಅಂಶಗಳನ್ನು ವಿವರವಾಗಿ ಪ್ರಧಾನ ವ್ಯವಸ್ಥಾಪಕರು (ಉತ್ತರ) ರವರು ಸಭೆಯ ಗಮನಕ್ಕೆ ತಂದು, ಸಭೆಯನ್ನು ಮುಂದುವರಿಸಲು ಕೋರಿದರು.

L1 ದರ, ಪರಿಮಾಣ ಹಾಗೂ ಮೊತ್ತದ ವಿವರಗಳು ಈ ಕೆಳಕಂಡಂತಿದೆ: -

| I. No. | Firm Name | Total | | |
|---|---|---|---|---|
| | | **No. of Locations L1 quoted** | **Qty in Bags** | **Amount in Rs.** |
| 1 | ACC | 11 | 34500 | 9789166.00 |
| 2 | Chettinad | 25 | 103667 | 29048534.00 |
| 3 | Vasavdatta | 25 | 139133 | 39200332.00 |
| 4 | Zuari | 20 | 56133 | 16327336.00 |
| 5 | Anjani Cement | 97 | 1065467 | 298693165.00 |
| 6 | Ultratech cement | 30 | 164400 | 46213000.00 |
| 7 | Bharathi Cement | 13 | 36700 | 10653470.00 |
| | **Total :** | | **1600000** | **449925003.00** |

## DETAILS OF L1 DESTINATIONS QUOTED BY THE FIRMS IN TENDER IND-48

| Sl No | Firm Name | OP CEMENT | | | | PP CEMENT | | | |
|---|---|---|---|---|---|---|---|---|---|
| | | Total No. of Destination | No. of Places single quoted | No. of Places Common quoted | Total | Total No. of Destination | No. of Places single quoted | No. of Places Common quoted | Total |
| 1 | ACC | **72** | 0 | 1 | 1 | **72** | 0 | 10 | 10 |
| 2 | Chettinad | **72** | 0 | 5 | 5 | **72** | 0 | 20 | 20 |
| 3 | Vasavdatta | **72** | 0 | 7 | 7 | **72** | 1 | 17 | 18 |
| 4 | Zuari | **72** | 0 | 1 | 1 | **72** | 1 | 18 | 19 |
| 5 | Anjani Cement | **72** | 62 | 2 | 64 | **72** | 28 | 5 | 33 |
| 6 | Ultratech cement | **72** | 0 | 6 | 6 | **72** | 0 | 24 | 24 |
| 7 | Bharathi Cement | **72** | 0 | 1 | 1 | **72** | 0 | 12 | 12 |
| | **Total :** | | **62** | **23** | **85** | | **30** | **106** | **136** |

ಮೇಲ್ಕಂಡ ವಿವಿಧ ಸರಬರಾಜುದಾರರು ನಮೂದಿಸಿದ ದರಗಳನ್ನು ಮತ್ತು ಡೆಸ್ಟೀನೆಷನ್‌ಗಳನ್ನು ಕೂಲಂಕುಷವಾಗಿ ಪರಿಶೀಲನಾ ಸಮಿತಿಯು ದೀರ್ಘವಾಗಿ ಚರ್ಚಿಸಿ, ಪರಿಶೀಲಿಸಿತು.

ಟೆಂಡರ್ ಮೂಲಕ ಸಿಮೆಂಟ್ ಸರಬರಾಜು ಮಾಡಲು ಅತಿ ಕಡಿಮೆ ದರ ನಮೂದಿಸಿರುವ ಸಂಸ್ಥೆಗಳಲ್ಲಿ ಮೆ:ಅಂಜನಿ ಸಿಮೆಂಟ್ಸ್ ರವರನ್ನು ಸಭೆಗೆ ಕರೆದು, ತಮ್ಮ ಸಂಸ್ಥೆಯ ಬಗ್ಗೆ ವಿವರಗಳಾದ ಗುಣಮಟ್ಟದ ಉತ್ಪಾದನೆ, ಸಾಗಾಣಿಕೆ, ದಾಸ್ತಾನು, ಪರಿಮಾಣ ಮತ್ತಿತರೇ ವಿವರಗಳನ್ನು ತಿಳಿಸಲು ಕೋರಿದರು.

ಸಭೆಯಲ್ಲಿ ಹಾಜರಿದ್ದ ಮೆ: ಅಂಜನಿ ಸಿಮೆಂಟ್ಸ್ ರವರು ತಮ್ಮ ಕಂಪೆನಿಯು 13 ವರ್ಷಗಳಷ್ಟು ಹಳೆಯದಾದ ಆಂಧ್ರ ಪ್ರದೇಶದ ಸಂಸ್ಥೆಯೆಂದು ಈಗಾಗಲೇ ಆಂಧ್ರ ಪ್ರದೇಶ, ಕೇರಳ, ಮಹಾರಾಷ್ಟ್ರ, ಒಡಿಶಾ ಮುಂತಾದ ರಾಜ್ಯಗಳಲ್ಲಿ ಸಾಕಷ್ಟು ಹೆಸರುವಾಸಿಯಾಗಿದ್ದು, ಸದ್ಯ ಕಾರ್ಖಾನೆಯಿಂದ ತಿಂಗಳಿಗೆ ಸುಮಾರು 20 ಲಕ್ಷ ಚೀಲಗಳಷ್ಟು ಪ್ರಮಾಣದಲ್ಲಿ ಸಿಮೆಂಟ್ ಉತ್ಪಾದನೆ ಮಾಡುತ್ತಿರುವುದರಿಂದ, ಕರ್ನಾಟಕ ರಾಜ್ಯಕ್ಕೆ ಹೊಸದಾಗಿ ಪರಿಚಯಿಸಲಾಗುತ್ತಿದೆ ಎಂದು ಹಾಗೂ ಉತ್ತಮ ಗುಣಮಟ್ಟದ ಸಿಮೆಂಟ್ ಉತ್ಪಾದನೆ ಮಾಡುತ್ತಿರುವ ಬಗ್ಗೆ ಸ್ಥೂಲ ಪರಿಚಯ ಮಾಡಿಕೊಂಡರು. ಸಂಸ್ಥೆಯ ಪ್ರತಿನಿಧಿಗಳು ನಾವು ನಮೂದಿಸಿರುವ L1 Destination ವಿಭಾಗದಿಂದ ಸರಬರಾಜು ಅದೇಶ ನೀಡಿದರೆ ಅದರ ಪ್ರಕಾರ ಸಮಯಕ್ಕೆ ಸರಿಯಾಗಿ ತಾವು ಪೂರ್ಣವಾಗಿ ಸಿಮೆಂಟ್ ಸರಬರಾಜು ಮಾಡಲು ಸಿದ್ದವಿರುವುದಾಗಿ ತಿಳಿಸಿದರು.

ವ್ಯವಸ್ಥಾಪಕ ನಿರ್ದೇಶಕರವರು, ಆಂಧ್ರ ಪ್ರದೇಶದಲ್ಲಿ ವಿದ್ಯುತ್ ಸಮಸ್ಯೆ ಇದ್ದು, ಸಂಸ್ಥೆಯಿಂದ ಕರೆದಿರುವ ಟೆಂಡರಿನಲ್ಲಿ ಅತಿ ಹೆಚ್ಚಿನ ಡೆಸ್ಟಿನೇಷನ್‌ಗಳಲ್ಲಿ (ಒ.ಪಿ.ಸಿ. ಸಿಮೆಂಟ್‌ನಲ್ಲಿ 64 ಮತ್ತು ಪಿ.ಪಿ.ಸಿಯಲ್ಲಿ 33) ಹಾಗೂ ಪರಿಮಾಣವನ್ನು (ಶೇಕಡ 60ರಷ್ಟು) L1 ದರದಲ್ಲಿ ಪಡೆದಿರುವುದರಿಂದ, ಸಂಸ್ಥೆಗೆ ಅಗತ್ಯವಿರುವಷ್ಟು ಪರಿಮಾಣ ಸಿಮೆಂಟ್ ಸರಬರಾಜು ಮಾಡಲು ಸಾಧ್ಯವಿರುವ ಬಗ್ಗೆ ಮಾಹಿತಿ ನೀಡಲು ಕೋರಿದರು. ಅಲ್ಲದೇ ಸರಬರಾಜುದಾರರು ತಮ್ಮ ಪತ್ರ ದಿನಾಂಕ: 19-11-2012ರಲ್ಲಿ ಕಾರ್ಖಾನೆಯ ಸಮೀಪವಿರುವ ಜಿಲ್ಲೆಗಳಾದ ರಾಯಚೂರು, ಬಳ್ಳಾರಿ, ಗುಲಬರ್ಗಾ, ಕೊಪ್ಪಳ, ಯಾದಗಿರಿ ಹಾಗೂ ಬೀದರ್ ಗಳಿಗೆ ಪಿ.ಪಿ.ಸಿ ಸಿಮೆಂಟ್ ಸರಬರಾಜು ಮಾಡಲು ಅನುಕೂಲವಾಗುವುದರಿಂದ ಸದರಿ ಜಿಲ್ಲೆಗಳಿಗೆ ಸರಬರಾಜು ಅದೇಶವನ್ನು ಕೊಡಲು ಕೋರಿರುವುದನ್ನು ಟೆಂಡರ್ ಪರಿಶೀಲನಾ ಸಮಿತಿ ಸಭೆಯ ಗಮನಕ್ಕೆ ತಂದರು. ಇದಕ್ಕೆ ಶ್ರೀ.ಪ್ರಭಾಕರ್ ಹೆಚ್ ಚೇಣಿ, ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ ರವರು ಟೆಂಡರ್ ನಲ್ಲಿ ಭಾಗವಹಿಸಿದ ವಿಭಾಗಗಳಲ್ಲಿ L1 ದರ ಇರುವ ಜಾಗಗಳಿಗೆ ಟೆಂಡರ್ ನಿಯಮಾವಳಿಯ ಪ್ರಕಾರ ಕಡ್ಡಾಯವಾಗಿ ಸರಬರಾಜು ಮಾಡಬೇಕಾಗಿರುವುದರಿಂದ ಪತ್ರದಲ್ಲಿ ಕೋರಿರುವುದನ್ನು ಪರಿಗಣಿಸಲು ಬರುವುದಿಲ್ಲವೆಂದು ತಿಳಿಸಿದರು.

ಶ್ರೀ.ಪ್ರಭಾಕರ್ ಹೆಚ್ ಚೇಣಿ, ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ ರವರು ಟೆಂಡರ್‌ದಲ್ಲಿ ನಮೂದಿಸಿರುವ ದರಕ್ಕಿಂತ ಕಡಿಮೆ ದರದ ಬಗ್ಗೆ ಚರ್ಚಿಸಲು ಈ ಸಭೆ ಕರೆದಿರುವುದಾಗಿ ತಿಳಿಸಿ, ಪಿ.ಪಿ.ಸಿ ಸಿಮೆಂಟ್ ಮತ್ತು ಒ.ಪಿ.ಸಿ ಸಿಮೆಂಟ್ ಗಳ ದರದಲ್ಲಿ ಸಾಮಾನ್ಯವಾಗಿ ರೂ.10-00 ವ್ಯತ್ಯಾಸ ಕಂಡು ಬರುತ್ತದೆ. ಆದುದರಿಂದ ಪರಿಷ್ಕೃತ ದರವನ್ನು ಸೂಚಿಸುವಂತೆ ಮೆ: ಅಂಜನಿ ಸಿಮೆಂಟ್ ಸಂಸ್ಥೆಯ ಪ್ರತಿನಿಧಿರವರಿಗೆ ತಿಳಿಸಿದರು.

ಮೆ:ಅಂಜನಿ ಸಿಮೆಂಟ್ ಸಂಸ್ಥೆಯ ಪ್ರತಿನಿಧಿಯವರು ಮಾತನಾಡುತ್ತಾ, ರಾಜ್ಯದಲ್ಲಿ ವಿದ್ಯುತ್ ಸಮಸ್ಯೆಯಿಂದ, ತಾವು ಗಾಯಿತ್ರಿ ಪವರ್ ಗ್ರಿಡ್ ರವರಿಂದ ಕಾರ್ಖಾನೆಗೆ ಹೆಚ್ಚಿನ ದರದಲ್ಲಿ ವಿದ್ಯುತ್ ಖರೀದಿಸುತ್ತಿರುವುದಾಗಿ ತಿಳಿಸುತ್ತಾ, ತಾವು ಈಗಾಗಲೇ ಅತೀ ಕಡಿಮೆ ಬೆಲೆಗೆ ದರ ನಮೂದಿಸಿರವುದರಿಂದ, ಇನ್ನಷ್ಟು ಕಡಿಮೆ ಮಾಡಲು ಕಷ್ಟ ಸಾಧ್ಯವೆಂದು ತಿಳಿಸಿದರು.

ಆಗ ಮುಖ್ಯ ಅಭಿಯಂತರರು, ಪಿಆರ್ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು ಬೃಹತ್ ಪರಿಮಾಣವಾಗಿದ್ದು, ಸರಬರಾಜು ಅವಧಿಯು 6 ತಿಂಗಳಿರುವುದರಿಂದ ಎರಡು ಸಿಮೆಂಟ್ ನಮೂದಿಸಿದ L1 ದರದಲ್ಲಿ ಕಡಿಮೆ ಮಾಡಲು ಕೋರಿದಾಗ, ಅಂತಿಮವಾಗಿ ಅವರು ಟೆಂಡರ್ ನಲ್ಲಿ ನಮೂದಿಸಿದ ದರಕ್ಕಿಂತ ನಾವು ಭಾಗವಹಿಸಿರುವ ಡೆಸ್ಟಿನೇಷನ್‌ಗಳಿಗೆ ಒ.ಪಿ.ಸಿ ಸಿಮೆಂಟ್ ಪ್ರತಿ ಚೀಲಕ್ಕೆ ರೂ.3-00 ಕಡಿಮೆ ಮಾಡಲು ಮತ್ತು ಪಿ.ಪಿ.ಸಿ. ಸಿಮೆಂಟಿಗೆ ಒ.ಪಿ.ಸಿ ದರ ಮತ್ತು ಪಿ.ಪಿ.ಸಿ.ದರದ ವ್ಯತ್ಯಾಸ ರೂ.10-00 ಇರುವಂತೆ ಸರಬರಾಜು ಮಾಡಲು ಒಪ್ಪಿದರು. ಅದರಂತೆ ಒಪ್ಪಿಗೆ ಪತ್ರವನ್ನು ನೀಡುವುದಾಗಿ ಸಭೆಗೆ ತಿಳಿಸಿದರು.

ಸಭೆಯು ಅಂತಿಮವಾಗಿ ಮೆ: ಅಂಜನಿ ಸಿಮೆಂಟ್ ರವರು ಸಂಸ್ಥೆಗೆ ಹೊಸಬರಾಗಿರುವುದರಿಂದ ಮತ್ತು ಅತಿ ಹೆಚ್ಚಿನ ಪರಿಮಾಣವನ್ನು ಪಡೆದಿರುವುದರಿಂದ ಸಮಿತಿಯು ಮೊದಲನೇ ಹಂತದಲ್ಲಿ 50 ಭಾಗ ಪರಿಮಾಣವನ್ನು ಸರಬರಾಜು ಮಾಡಲು ಆದೇಶ ನೀಡಲು ತೀರ್ಮಾನಿಸಿದ್ದು, ಸರಬರಾಜಿನ ನಿರ್ವಹಣೆಯನ್ನು ಗಮನಿಸಿ ಬಾಕಿ 50 ಭಾಗದ ಪರಿಮಾಣವನ್ನು ಸರಬರಾಜು ಮಾಡಲು ಅದೇಶ ನೀಡಬಹುದೆಂದು ತೀರ್ಮಾನಿಸಲಾಯಿತು.

ಈ ಸಮಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಬಜೆಟ್ ಪೂರ್ವ ಸಭೆ ನಿಗದಿಪಡಿಸಿ ಹಾಜರಾಗಲು ಸೂಚಿಸಿದ್ದರಿಂದ, ಬಾಕಿ ಉಳಿದ ಸಿಮೆಂಟ್ ಸರಬರಾಜುದಾರರಿಗೆ ಮರು ದಿನ ಅಂದರೆ 18-12-2012ರ ಬೆಳಿಗ್ಗೆ 10-30ಕ್ಕೆ ಸಭೆ ಮುಂದುವರಿಸುವುದಾಗಿ ತಿಳಿಸಿ, ಸಭೆಯನ್ನು ಮುಂದೂಡಲಾಯಿತು.

ದಿನಾಂಕ: 18-12-2012ರ ಬೆಳಿಗ್ಗೆ ಪುನ: ಸಭೆ ಸೇರಿ, ಟೆಂಡರ್ ಪ್ರಕ್ರಿಯೆಯಲ್ಲಿ ಕೆಲವು ವಿಭಾಗ/ ಉಪ ವಿಭಾಗಗಳಿಗೆ ಕಡಿಮೆ ದರ ನಮೂದಿಸಿ, L1 ಆಗಿರುವ ಸಿಮೆಂಟ್ ಸರಬರಾಜು ಸಂಸ್ಥೆಯ ಪ್ರತಿನಿಧಿಗಳನ್ನು ಕರೆಯಲಾಯಿತು.

**ಅಲ್ಟ್ರಾಟೆಕ್ ಸಿಮೆಂಟ್ಸ್:**

ಶ್ರೀ.ಎಸ್. ವಿ. ಪಾಟೀಲ್ ರವರು, ಅಲ್ಟ್ರಾಟೆಕ್, ಒ.ಪಿ.ಸಿ ಸಿಮೆಂಟ್ಸ್ 6 Destinationಗಳಲ್ಲಿ L1 ಆಗಿದ್ದು, ಮತ್ತು 24 Destinationಗಳಲ್ಲಿ L1 z ದರ ನಮೂದಿಸಿರುತ್ತಾರೆ. ಈ ಎಲ್ಲಾ Destination ಗಳಿಗೆ ಒ.ಪಿ.ಸಿ ಸಿಮೆಂಟ್ ದರದಲ್ಲಿ ಪ್ರತಿ ಚೀಲಕ್ಕೆ ರೂ.3-00 ಕಡಿಮೆ ಮಾಡಿ ಸರಬರಾಜು ಮಾಡಲು ಹಾಗೂ ಪಿ.ಪಿ.ಸಿ ಸಿಮೆಂಟ್‌ಗೆ ನಮೂದಿಸಿದ L1ದರದಲ್ಲಿ Common Destination ಗಳಲ್ಲಿ ರೂ.13-00 ವ್ಯತ್ಯಾಸದಲ್ಲಿ ಸರಬರಾಜು ಮಾಡುವುದಾಗಿ ತಿಳಿಸಿದರು ಹಾಗೂ ಅದರಂತೆ ಒಪ್ಪಿಗೆ ಪತ್ರವನ್ನು ನೀಡುವುದಾಗಿ ಸಭೆಗೆ ತಿಳಿಸಿದರು.

**ಜುವಾರಿ ಸಿಮೆಂಟ್ಸ್:**

ಜುವಾರಿ ಸಿಮೆಂಟ್ಸ್ ರವರು ಒ.ಪಿ.ಸಿ ಸಿಮೆಂಟ್‌ಗೆ ಒಂದು Destination ನಲ್ಲಿ ಹಾಗೂ ಪಿ.ಪಿ.ಸಿ 1-Destination ನಲ್ಲಿ ಹಾಗೂ ಪಿ.ಪಿ.ಸಿ ಸಿಮೆಂಟ್‌ನಲ್ಲಿ 19 Destination ಗಳಲ್ಲಿ L1ದರಗಳನ್ನು ನಮೂದಿಸಿರುತ್ತಾರೆ. ಸದರಿ ರವರು ಒ.ಪಿ.ಸಿ ಸಿಮೆಂಟ್‌ನಲ್ಲಿ ನಮೂದಿಸಿರುವ ದರದಲ್ಲಿ ಪ್ರತಿ ಚೀಲಕ್ಕೆ ರೂ.3-00 ಕಡಿಮೆ ಮಾಡಿ ಹಾಗೂ ಪಿ.ಪಿ.ಸಿ ಸಿಮೆಂಟ್ ನಮೂದಿಸಿದ L1ದರದಲ್ಲಿ Common Destination ಗಳಿಗೆ ಪ್ರತಿ ಚೀಲಕ್ಕೆ ರೂ.13-00 ವ್ಯತ್ಯಾಸದಲ್ಲಿ ಸರಬರಾಜು ಮಾಡುವುದಾಗಿ ತಿಳಿಸಿದರು ಹಾಗೂ ಅದರಂತೆ ಒಪ್ಪಿಗೆ ಪತ್ರವನ್ನು ನೀಡುವುದಾಗಿ ಸಭೆಗೆ ತಿಳಿಸಿದರು.

**ಎ.ಸಿ.ಸಿ. ಸಿಮೆಂಟ್ಸ್ :**

ಎ.ಸಿ.ಸಿ. ಸಿಮೆಂಟ್ಸ್ ರವರು 1 Destination ಒ.ಪಿ.ಸಿ.ಸಿಮೆಂಟ್ ಮತ್ತು 10 Destination ಗಳಲ್ಲಿ, ಪಿ.ಪಿ.ಸಿ ಸಿಮೆಂಟಿಗೆ ನಮೂದಿಸಿದ L1 ದರದಲ್ಲಿ ಪ್ರತಿ ಚೀಲಕ್ಕೆ ರೂ.3–00 ಕಡಿಮೆ ಮಾಡಿ ಸರಬರಾಜು ಮಾಡಲು ಹಾಗೂ ಪಿ.ಪಿ.ಸಿ ಸಿಮೆಂಟ್ ನಮೂದಿಸಿದ L1ದರದಲ್ಲಿ Common Destination ಗಳಲ್ಲಿ ಪ್ರತಿ ಚೀಲಕ್ಕೆ ರೂ.13–00 ವ್ಯತ್ಯಾಸದಲ್ಲಿ ಸರಬರಾಜು ಮಾಡುವುದಾಗಿ ತಿಳಿಸಿದರು ಹಾಗೂ ಅದರಂತೆ ಒಪ್ಪಿಗೆ ಪತ್ರವನ್ನು ನೀಡುವುದಾಗಿ ಸಭೆಗೆ ತಿಳಿಸಿದರು.

**ವಾಸವದತ್ತ ಸಿಮೆಂಟ್ಸ್:**

ವಾಸವದತ್ತ ಸಿಮೆಂಟ್ಸ್ ರವರು 7 Destination ಗಳಿಗೆ ಒ.ಪಿ.ಸಿ ಸಿಮೆಂಟ್ ದರದಲ್ಲಿ ಮತ್ತು 18 Destination ಗಳಿಗೆ ಪಿ.ಪಿ.ಸಿ ಸಿಮೆಂಟ್ ದರದಲ್ಲಿ L1 ಆಗಿರುತ್ತಾರೆ. ಸಂಸ್ಥೆಯವರು L1 ಆಗಿರುವ Destination ಗಳಲ್ಲಿ ಒ.ಪಿ.ಸಿ ದರದಲ್ಲಿ ಪ್ರತಿ ಚೀಲಕ್ಕೆ ರೂ.3–00 ಕಡಿಮೆ ಮಾಡಲು ಒಪ್ಪಿರುತ್ತಾರೆ ಹಾಗೂ ಪಿ.ಪಿ.ಸಿ. ಸಿಮೆಂಟ್‌ನಲ್ಲಿ ನಮೂದಿಸಿದ L1 ದರದಲ್ಲಿ Common Destination ಗಳಲ್ಲಿ ಪ್ರತಿ ಚೀಲಕ್ಕೆ ರೂ.13–00 ರ ವ್ಯತ್ಯಾಸದಂತೆ ಸರಬರಾಜು ಮಾಡುವುದಾಗಿ ತಿಳಿಸಿದರು ಹಾಗೂ ಅದರಂತೆ ಒಪ್ಪಿಗೆ ಪತ್ರವನ್ನು ನೀಡುವುದಾಗಿ ಸಭೆಗೆ ತಿಳಿಸಿದರು.

**ಭಾರತಿ ಸಿಮೆಂಟ್ಸ್ :**

ಭಾರತಿ ಸಿಮೆಂಟ್ಸ್ ರವರು 01 Destination ಗೆ ಒ.ಪಿ.ಸಿ ಸಿಮೆಂಟ್ ಮತ್ತು 12 Destination ಗಳಿಗೆ ಪಿ.ಪಿ.ಸಿ ಸಿಮೆಂಟ್ ದರದಲ್ಲಿ L1 ಆಗಿರುತ್ತಾರೆ. ಸಂಸ್ಥೆಯವರು L1 ಆಗಿರುವ Destination ಗಳಲ್ಲಿ ಒ.ಪಿ.ಸಿ ದರದಲ್ಲಿ ಪ್ರತಿ ಚೀಲಕ್ಕೆ ರೂ.3–00 ಪ್ರತಿ ಚೀಲಕ್ಕೆ ಕಡಿಮೆ ಮಾಡಲು ಒಪ್ಪಿರುತ್ತಾರೆ. ಪಿ.ಪಿ.ಸಿ ನಮೂದಿಸಿದ L1 ದರದಲ್ಲಿ Common Destination ಗಳಲ್ಲಿ ಪ್ರತಿ ಚೀಲಕ್ಕೆ ರೂ.13–00 ರ ವ್ಯತ್ಯಾಸದಂತೆ ಸರಬರಾಜು ಮಾಡುವುದಾಗಿ ತಿಳಿಸಿದರು ಹಾಗೂ ಅದರಂತೆ ಒಪ್ಪಿಗೆ ಪತ್ರವನ್ನು ನೀಡುವುದಾಗಿ ಸಭೆಗೆ ತಿಳಿಸಿದರು.

**ಚೆಟ್ಟಿನಾಡು ಸಿಮೆಂಟ್ಸ್:**

ಚೆಟ್ಟಿನಾಡು ಸಿಮೆಂಟ್ಸ್ ರವರು 05 Destination ಗಳಲ್ಲಿ ಒ.ಪಿ.ಸಿ ಸಿಮೆಂಟ್ ಮತ್ತು 20 Destination ಗಳಲ್ಲಿ ಪಿ.ಪಿ.ಸಿ ಸಿಮೆಂಟ್ ದರದಲ್ಲಿ L1 ಆಗಿರುತ್ತಾರೆ. ಸದರಿ ಸಂಸ್ಥೆಯವರು L1 ಆಗಿರುವ Destination ಗಳಲ್ಲಿ ಒ.ಪಿ.ಸಿ ದರದಲ್ಲಿ ಪ್ರತಿ ಚೀಲಕ್ಕೆ ರೂ.3–00 ಕಡಿಮೆ ಮಾಡಲು ಒಪ್ಪಿರುತ್ತಾರೆ. ಪಿ.ಪಿ.ಸಿ ನಮೂದಿಸಿದ L1 ದರದಲ್ಲಿ Common Destination ಗಳಲ್ಲಿ ಪ್ರತಿ ಚೀಲಕ್ಕೆ ರೂ.13–00 ರ ವ್ಯತ್ಯಾಸದಂತೆ ಸರಬರಾಜು ಮಾಡುವುದಾಗಿ ತಿಳಿಸಿದರು ಹಾಗೂ ಅದರಂತೆ ಒಪ್ಪಿಗೆ ಪತ್ರವನ್ನು ನೀಡುವುದಾಗಿ ಸಭೆಗೆ ತಿಳಿಸಿದರು.

ಕಡೆಯದಾಗಿ ಎಲ್ಲಾ ಸಿಮೆಂಟ್ ಸರಬರಾಜು ಸಂಸ್ಥೆಯ ಪ್ರತಿನಿಧಿಗಳನ್ನು ಒಟ್ಟಾಗಿ ಕರೆದು, ಸಭೆಯಲ್ಲಿ ನಿರ್ಧರಿಸಿರುವಂತೆ ಅಧಿಕೃತ ಒಪ್ಪಿಗೆ ಪತ್ರಗಳನ್ನು ಕೂಡಲೇ ಸಲ್ಲಿಸಲು ಸೂಚಿಸಲಾಯಿತು ಮತ್ತು ಪರಿಷ್ಕರಿಸಿದ ದರವನ್ನು ಒಪ್ಪಿ, ಅದರಂತೆ ಕೆಳಕಂಡ 80000 ಎಂ.ಟಿ.(16.00ಲಕ್ಷ ಬ್ಯಾಗ್) ಸಿಮೆಂಟ್‌ಗೆ ಮತ್ತು ಪರಿಷ್ಕೃತ ದರದಂತೆ ರೂ. **43,84,32,100.00** ಮೊತ್ತಕ್ಕೆ ಅನುಮೋದನೆಯನ್ನು ನೀಡಲಾಯಿತು.

## ABSTRACT OF QUNTITY AND AMOUNT BASED ON REVISED L1 RATES FOR SUPPLY OF CEMENT

| Sl. No. | Firm Name | OP/PP CEMENT | |
|---|---|---|---|
| | | Qty in Bags | Amount in Rs. |
| 1 | ACC | 34500 | 9349999.00 |
| 2 | Chettinad | 103667 | 27860960.00 |
| 3 | Vasavdatta | 139133 | 37881507.00 |
| 4 | Zuari | 56134 | 15607148.00 |
| 5 | Anjani Cement | 1065466 | 292958223.00 |
| 6 | Ultratech cement | 164400 | 44585801.00 |
| 7 | Bharathi Cement | 36700 | 10188462.00 |
| | **Total :** | **1600000** | **438432100.00** |

(ನಲವತ್ತ ಮೂರು ಕೋಟಿ ಎಂಭತ್ತ ನಾಲ್ಕು ಲಕ್ಷ ಮುವತ್ತೆರಡು ಸಾವಿರದ ನೂರು ರೂಪಾಯಿಗಳು ಮಾತ್ರ)

(ಆರ್. ರಂಗರಾಜನ್)
ಪ್ರಧಾನ ವ್ಯವಸ್ಥಾಪಕರು(ಉತ್ತರ)
ಹಾಗೂ ಸದಸ್ಯ ಕಾರ್ಯದರ್ಶಿ.

(ಹೆಚ್.ಜಿ. ಶಿವಾನಂದಮೂರ್ತಿ)
ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು:

- ಟೆಂಡರ್ ಪರಿಶೀಲನಾ ಸಮಿತಿಯ ಎಲ್ಲಾ ಅಧಿಕಾರಿಗಳಿಗೆ – ಮಾಹಿತಿಗಾಗಿ ರವಾನಿಸಲಾಗಿದೆ.
- ಪ್ರಧಾನ ವ್ಯವಸ್ಥಾಪಕರು(ಕೇಂದ್ರೀಯ)/(ದಕ್ಷಿಣ)(ಹಣಕಾಸು) ಮಾಹಿತಿಗಾಗಿ